ಏಳನೆಯ ತರಗತಿ (ದ್ವಿತೀಯ ಭಾಷೆ ಕನ್ನಡ)

ಗೌರವಾನ್ವಿತ ಶಿಕ್ಷಕ ಬಾಂಧವರೆ,

ಸೇತುಬಂಧ ಕಾರ್ಯಕ್ರಮವು ಶಿಕ್ಷಕರಿಗೆ ಚಿರಪರಿಚಿತವಾಗಿದ್ದರೂ ಈ ಸಾಲಿನ ಸೇತುಬಂಧ ನವೀನ ಹಾಗೂ ಸವಾಲಿನಿಂದ ಕೂಡಿದೆ. ಕೋವಿಡ್-19ರ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಶಾಲೆಗಳು ಸಮರ್ಪಕವಾಗಿ ನಡೆದಿಲ್ಲವಾದ ಕಾರಣ ಈ ಸಾಲಿನ ಶೈಕ್ಷಣಿಕ ವರ್ಷದ ಸೇತುಬಂಧ ಕಾರ್ಯಕ್ರಮವು ಶಿಕ್ಷಕರಾದ ನಮಗೆ ಸವಾಲಾಗಿದೆ. ವಿದ್ಯಾರ್ಥಿಗಳು ಆಯಾ ತರಗತಿಯಲ್ಲಿ ಗಳಿಸಬೇಕಾದ ಸಾಮರ್ಥ್ಯವನ್ನು ಗಳಿಸಲು ಕಷ್ಟಸಾಧ್ಯವಾಗಿರುವುದರಿಂದ ಕಲಿಕಾ ಕೊರತೆ ಉಂಟಾಗಿರುತ್ತದೆ. ಇದನ್ನು ಸರಿದೂಗಿಸುವ ನಿಟ್ಟಿನಲ್ಲಿ ಈ ಸಾಹಿತ್ಯವು ಪೂರಕವಾಗಿರುತ್ತದೆ.

ಶಿಕ್ಷಕರು, ಸೇತುಬಂಧ ಸಾಹಿತ್ಯದಲ್ಲಿರುವ ಮೂವತ್ತು ದಿನಗಳ 'ಬಂಧ' ಸಾಹಿತ್ಯದಲ್ಲಿ ನೀಡಿರುವ ಸೂಚನೆಯಂತೆ ಚಟುವಟಿಕೆಗಳನ್ನು ನಡೆಸಿ ವಿದ್ಯಾರ್ಥಿಗಳನ್ನು ಸದರಿ ತರಗತಿಗೆ ಸಿದ್ಧಗೊಳಿಸಬೇಕು.

ಈ ಹಂತದ ಬೋಧನಾ ಕಲಿಕಾ ಪ್ರಕ್ರಿಯೆಯು ಶಿಶು ಕೇಂದ್ರಿತ, ಚಟುವಟಿಕೆ ಆಧಾರಿತ ಮತ್ತು ಸಂತಸದಾಯಕ ಕಲಿಕೆಗೆ ಒತ್ತು ನೀಡುವಂತಿರಬೇಕು. ಇದಕ್ಕಾಗಿ ಶಿಕ್ಷಕರು ಉತ್ತಮ ರೀತಿಯಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಅಗತ್ಯ ಮತ್ತು ಅತ್ಯಂತ ಅನಿವಾರ್ಯವಾಗಿದ್ದು ನಿಮ್ಮ ಸೃಜನಶೀಲತೆಗೆ ಪೂರ್ಣ ಅವಕಾಶವಿರುತ್ತದೆ.

- ❖ ಸೇತುಬಂಧ ಕಾರ್ಯಕ್ರಮದ ಈ ಸಾಹಿತ್ಯವನ್ನು ಶಿಕ್ಷಕರು ಓದಿ, ಅರ್ಥೈಸಿಕೊಳ್ಳುವುದು.
- ❖ ಇಲ್ಲಿನ ಚಟುವಟಿಕೆಗಳು ಕೇವಲ ಮಾದರಿಯಷ್ಟೆ. ಶಿಕ್ಷಕರು ವಿಭಿನ್ನವಾದ ರೀತಿಯಲ್ಲಿ ಸೃಜನಾತ್ಮಕವಾಗಿ ಚಟುವಟಿಕೆಗಳನ್ನು ರೂಪಿಸಿಕೊಳ್ಳುವುದು.
- ❖ ಏಳನೆಯ ತರಗತಿಯ ಈ ಸಾಹಿತ್ಯದಲ್ಲಿ ಐದು ಮತ್ತು ಆರನೆಯ ತರಗತಿಯ ಅಪೇಕ್ಷಿತ ಕಲಿಕಾಫಲ ಹಾಗೂ ಕಲಿಕಾಂಶಗಳನ್ನು ಗಮನಿಸಿ ಚಟುವಟಿಕೆಗಳನ್ನು ರೂಪಿಸಲಾಗಿದೆ.
- ❖ ಈ ಸಾಹಿತ್ಯದಲ್ಲಿ ಅನೇಕ ಸಲಹಾತ್ಮಕ ಚಟುವಟಿಕೆಗಳನ್ನು ನೀಡಲಾಗಿದ್ದು ಶಿಕ್ಷಕರು ನಿರ್ವಹಿಸಬೇಕಾದ ಒಂದು ಚಟುವಟಿಕೆಯ ಬಗ್ಗೆ ವಿವರಣೆ ನೀಡಲಾಗಿದೆ. ಉಳಿದ ಚಟುವಟಿಕೆಗಳ ಹೆಸರುಗಳನ್ನು ಮಾತ್ರ ನೀಡಲಾಗಿದ್ದು ಶಿಕ್ಷಕರು ತಮಗೆ ಇಷ್ಟವಾದ ಚಟುವಟಿಕೆಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಿದೆ.

ತರಗತಿ : 7 ವಿಷಯ :ಕನ್ನಡ (ದ್ವಿತೀಯಭಾಷೆ) ಸೇತುಬಂಧ: 'ಬಂಧ' ಸಾಹಿತ್ಯ

| | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳನಿರ್ವಹಣೆಗಾಗಿಸೂಚನೆಗಳು |
|---|---|---|---|---|
| 1<br>2 | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗೀತೆ, ಕಥೆ ಮತ್ತು ಒಗಟುಗಳನ್ನು ಆಲಿಸುವುದರ ಜತೆಗೆ ಅರ್ಥಮಾಡಿಕೊಳ್ಳುವರು. | ಆಲಿಸಿದ ಸರಳ ಪ್ರಾಸಗೀತೆಯಲ್ಲಿರುವ ಪ್ರಾಸಪದಗಳನ್ನು ಗುರುತಿಸುತ್ತಾರೆ. | 1.1 ನಲಿಯುತ್ತ ಆಲಿಸೋಣ<br>1.2 ಜನಪದ ಸೊಗಡು<br>1.3 ಕೇಳಿ ಗ್ರಹಿಸಿ | 1.1 ಪ್ರಾಸಗೀತೆಗಳ ಧ್ವನಿಸುರುಳಿಯನ್ನು ಕೇಳಿಸಿ ಪ್ರಾಸಗೀತೆಯನ್ನು ವಿದ್ಯಾರ್ಥಿಗಳಿಂದ ವೈಯಕ್ತಿಕ ಮತ್ತು ಸಾಮೂಹಿಕವಾಗಿ ಹಾಡಿಸಿ<br>1.2 ಆಲಿಸಿದ ಪ್ರಾಸಗೀತೆಯಲ್ಲಿರುವ ಪ್ರಾಸಪದಗಳನ್ನು ಹೇಳಿಸಿ |
| 3 | | ಕಥೆಗಳಲ್ಲಿ ಬರುವ ಪಾತ್ರಗಳನ್ನು ಗುರುತಿಸುತ್ತಾರೆ.<br><br>ಕಥೆಯಲ್ಲಿರುವ ನೀತಿಯನ್ನು ಅರಿತು ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆ | 2.1 ಕಥೆಯನ್ನು ಆಲಿಸೋಣ – ನೀತಿಯನ್ನು ಪಾಲಿಸೋಣ.<br>2.2 ಪಾತ್ರ ವಿಶೇಷ<br>2.3 ಬಾನುಲಿ – ಕೇಳಿ ನಲಿ | 2.1 ಸರಳ ಕಥೆಗಳ ಧ್ವನಿಸುರುಳಿಯನ್ನು ಕೇಳಿಸುವುದು ಅಥವಾ ವೀಡಿಯೋ ತೋರಿಸಿ<br>2.2 ಕಥೆಯಲ್ಲಿ ಕಂಡುಬರುವ ಪಾತ್ರಗಳನ್ನುಪಟ್ಟಿಮಾಡಿಸಿ<br>2.3 ರೇಡಿಯೋನಲ್ಲಿ ಪ್ರಸಾರವಾಗುವ ಕರುಣಾಳು ಬಾ ಬೆಳಕೆ ಅಂತಹ ಕಾರ್ಯಕ್ರಮದ ಧ್ವನಿಸುರುಳಿಯನ್ನು ಕೇಳಿಸಿ |
| | | ಆಲಿಸಿದ ಒಗಟನ್ನು ಅರ್ಥಮಾಡಿಕೊಂಡು ಬಿಡಿಸಿ ಉತ್ತರವನ್ನು ತಿಳಿಯುತ್ತಾರೆ. | 3.1 ಒಗಟನ್ನುಬಿಡಿಸೋಣ<br>3.2 ನಾನ್ಯಾರು ನೀ ಹೇಳು<br>3.3 ನನ್ನ ಪ್ರಶ್ನೆ – ನಿನ್ನ ತ್ತರ | 3.1 ಶಿಕ್ಷಕರು ವಿದ್ಯಾರ್ಥಿಗಳಿಗೆ ಕೆಲವು ಸರಳ ಹಾಗೂ ಸಾಧಾರಣ ಒಗಟುಗಳನ್ನು ಕೇಳಿರಿ<br>ಉದಾ : ಮೇಲಕ್ಕೂ ಹೋಗುತ್ತದೆ, ಕೆಳಗೂ |

| | | | | |
|---|---|---|---|---|
| | | | | ಹೋಗುತ್ತದೆ ಆದರೂ ನಿಂತಲ್ಲೇ ನಿಲ್ಲುತ್ತದೆ - ಮೆಟ್ಟಿಲು ವಿದ್ಯಾರ್ಥಿಗಳಿಂದ ಅವರಿಗೆ ಪರಿಚಿತವಿರುವ ಒಗಟುಗಳನ್ನು ಹೇಳಿಸಿ |
| 4 | ಚಿತ್ರವನ್ನು ನೋಡಿ ಅದರಲ್ಲಿರುವ ವಿಷಯವನ್ನು ಸರಿಯಾಗಿ ಗ್ರಹಿಸಿ ವಿವರಿಸುವರು. | ಚಿತ್ರದಲ್ಲಿರುವ ನಾಮಪದಗಳನ್ನು ಗುರುತಿಸುತ್ತಾರೆ. ಚಿತ್ರದಲ್ಲಿರುವ ವಿಷಯಾಂಶವನ್ನು ಅರಿತು ಅದರ ಬಗ್ಗೆ ತಮ್ಮದೇ ಆದ ಮಾತುಗಳಲ್ಲಿ ಏನು? ಏಕೆ? ಎಂಬುದನ್ನು ವಿವರಿಸುತ್ತಾರೆ. | 4.1 ಚಿತ್ರ ನೋಡು – ನೋಡಿ ಹೇಳು<br><br>4.2 ಪಟ್ಟಿ ಮಾಡಿಸುವುದು<br><br>4.3 ಅದೇನು? ಅದೇಕೆ? | 4.1 ಪರಿಸರ ಸಂರಕ್ಷಣೆ, ಪರಿಸರಮಾಲಿನ್ಯ, ಸಂಚಾರ ದಟ್ಟಣೆ ಇತ್ಯಾದಿ ಪರಿಚಿತ ವಿಷಯಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಪ್ರದರ್ಶಿಸುವುದು. ವಿದ್ಯಾರ್ಥಿಗಳಿಂದ ಆ ಚಿತ್ರದಲ್ಲಿರುವ ವಿಷಯಾಂಶಕ್ಕೆ ಸಂಬಂಧಿಸಿದಂತೆ ವಿವರಣೆ ಹೇಳಿಸಿ<br><br>4.2 ಆ ಚಿತ್ರದಲ್ಲಿರುವ ನಾಮಪದಗಳನ್ನು ಪಟ್ಟಿ ಮಾಡಿಸಿ<br><br>4.3 ಚಿತ್ರಕ್ಕೆ ಸಂಬಂಧಿಸಿದಂತೆ ಏನು? ಏಕೆ? ಪ್ರಶ್ನೆಗಳಿಗೆ ಉತ್ತರ ಪಡೆಯಿರಿ. |
| 5<br><br>6 | ಪರಿಚಿತ ಸನ್ನಿವೇಶ ಅಥವಾ ಘಟನೆಯ ಬಗ್ಗೆ ನಿರರ್ಗಳವಾಗಿ ಮಾತನಾಡುವರು. | ಪರಿಚಿತ ವಿಷಯವನ್ನು ಕುರಿತು ಸೂಕ್ತ ಸ್ವರಭಾರದೊಂದಿಗೆ ಸ್ಪಷ್ಟವಾಗಿ ಮಾತನಾಡುತ್ತಾರೆ. | 5.1 ಆಶುಭಾಷಣ<br>5.2 ಕಿರುಭಾಷಣ<br>5.3 ವಿಚಾರ ಸಂಕಿರಣ | 5.1 ಪರಿಚಿತವಿರುವ ಸರಳ ವಿಷಯಗಳನ್ನು ನೀಡಿ ಆಶುಭಾಷಣ ಸ್ಪರ್ಧೆಯನ್ನು ನಡೆಸಿ<br>ಉದಾ : ನೀರು, ಪರಿಸರ, ಅರಣ್ಯ |

| | | | | |
|---|---|---|---|---|
| | | ಪರಿಚಿತ ಸನ್ನಿವೇಶವನ್ನು ಕುರಿತು ಸಹಜ ರೀತಿಯಲ್ಲಿ ಸಂಭಾಷಣೆ ಮಾಡುತ್ತಾರೆ. | 6.1 ಸಂಭಾಷಣೆ<br>6.2 ನಾಟಕಾಭಿನಯ<br>6.3 ಏಕಪಾತ್ರಾಭಿನಯ | 6.1 ಪರಿಚಿತ ವಿಷಯಗಳನ್ನು ನೀಡಿ ಅವುಗಳ ಬಗ್ಗೆ ವಿದ್ಯಾರ್ಥಿಗಳಿಂದ ಸಂಭಾಷಣೆ ನಡೆಸಿ<br>ಉದಾ :ವ್ಯಾಪಾರಿ-ಗ್ರಾಹಕ, ಬಸ್ ಕಂಡಕ್ಟರ್-ಪ್ರಯಾಣಿಕ |
| 7 | ಪರಿಚಿತ ಮತ್ತು ಅಪರಿಚಿತ ಸನ್ನಿವೇಶಗಳ ಬಗ್ಗೆ ತಮ್ಮ ಅನಿಸಿಕೆ ಮತ್ತು ಅಭಿಪ್ರಾಯವನ್ನು ಹಂಚಿಕೊಳ್ಳುವರು. | ಶಾಲೆಯಲ್ಲಿ ನಡೆದ ವಿವಿಧ ಕಾರ್ಯಕ್ರಮಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಳ್ಳುತ್ತಾರೆ. | 7.1 ನನ್ನ ಅನಿಸಿಕೆ – ನನ್ನ ಅನುಭವ<br>7.2 ನನ್ನ ಬಸ್ಸು ಪ್ರಯಾಣ<br>7.3 ಗೆಳೆಯರ ಸಂಗ | 7.1 ಶಾಲೆಯಲ್ಲಿ ನಡೆದ ವಿವಿಧ ಕಾರ್ಯಕ್ರಮಗಳ ಬಗ್ಗೆ ಅಥವಾ ಪ್ರಚಲಿತ ವಿದ್ಯಮಾನಗಳ ಬಗ್ಗೆ ವಿದ್ಯಾರ್ಥಿಗಳಿಂದ ಅನಿಸಿಕೆ ಅಥವಾ ಅನುಭವಗಳನ್ನು ಹೇಳಿಸಿ<br>ಉದಾ : ಶಾಲಾ ವಾರ್ಷಿಕೋತ್ಸವ, ಶಾಲಾ ವಸ್ತುಪ್ರದರ್ಶನ |
| 8 | | ಅಪರಿಚಿತ ವಿಷಯವನ್ನು ಆಲಿಸಿ ಅದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಾರೆ | 8.1 ಅಭಿಪ್ರಾಯ ಹೇಳು<br>8.2 ನನ್ನದೊಂದು ಸಲಹೆ | 8.1 ರಾಮಾಯಣ ಅಥವಾ ಮಹಾಭಾರತದಲ್ಲಿ ನಡೆದಿರುವ ಅಪರಿಚಿತ ಘಟನೆಯೊಂದನ್ನು ವಿವರಿಸಿ, ಆ ಘಟನೆಯ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯವನ್ನು ಹೇಳಿಸಿ<br>ಉದಾ : ವಾಲಿಯ ಸಂಹಾರ, ದುರ್ಯೋಧನ-ಕರ್ಣರ ಸ್ನೇಹ |
| 9 | ಸೂಕ್ತ ಸ್ವರಭಾರ ಮತ್ತು ಹಾವಭಾವದ ಮೂಲಕ ಸರಳ ಕಥೆಯನ್ನು | ಆಂಗಿಕ ಅಭಿನಯ ಮತ್ತು ಸ್ವರಭಾರದೊಂದಿಗೆ ಕಥೆಯನ್ನು ತನ್ನದೆಯಾದ | 9.1 ನನ್ನ ಕಥೆ ನನ್ನಶೈಲಿ<br>9.2 ಸನ್ನಿವೇಶ/ಘಟನೆ | 9.1 ವಿದ್ಯಾರ್ಥಿಗಳಿಂದ ಅವರು ಮೆಚ್ಚುವ ಕಥೆಯನ್ನು ಅವರದೇ ಶೈಲಿಯಲ್ಲಿ ಹೇಳಿಸಿ<br>9.2 ವಿದ್ಯಾರ್ಥಿಗಳಿಂದ ಪರಿಚಿತ ಸನ್ನಿವೇಶ ಅಥವಾ |

| | | | | |
|---|---|---|---|---|
| | ಹೇಳುವುದು. | ಧಾಟಿಯಲ್ಲಿ ಅರ್ಥಪೂರ್ಣವಾಗಿ ನಿರೂಪಿಸುತ್ತಾರೆ. | | ಘಟನೆಯನ್ನು ಹೇಳಿಸಿ. |
| 10 | | ಕಥೆಯ ನೀತಿಯನ್ನುಅರಿತು, ಅದನ್ನು ತಮ್ಮ ನಿಜಜೀವನದಲ್ಲಿಯೂ ಅಳವಡಿಸಿಕೊಳ್ಳುತ್ತಾರೆ. | 10.1 ಕೇಳಿ ಅನ್ವಯಿಸು<br>10.2 ಕೇಳಿ ಗುರುತಿಸು<br>10.3 ಕಥೆಯಲ್ಲಿ ಗಾದೆ | 10.1 ಕಥೆಯನ್ನು ಮನನ ಮಾಡಿಕೊಂಡು ಕಥೆಯಲ್ಲಿ ಇರುವ ನೀತಿಯನ್ನು ಹೇಳಿಸಿ.<br>10.2 ಕಥೆಯಲ್ಲಿ ಬಳಕೆಯಾಗಿರುವ ನಾಮಪದಗಳನ್ನು ಪಟ್ಟಿ ಮಾಡಿಸಿ.<br>10.3 ಕಥೆಯು ಗಾದೆಮಾತಿಗೆ ಅನ್ವಯವಾಗುವಂತಿದ್ದರೆ, ಅಂತಹ ಗಾದೆಮಾತನ್ನು ಹೇಳಿಸಿ. |
| 11<br><br>12 | ಸರಳ ಪದ ಹಾಗೂ ವಾಕ್ಯಗಳನ್ನು ಸ್ಪಷ್ಟವಾಗಿ ಓದುವರು. | ಹ್ರಸ್ವಸ್ವರ-ದೀರ್ಘಸ್ವರಗಳ ವ್ಯತ್ಯಾಸವನ್ನು ತಿಳಿದು ಸ್ಪಷ್ಟ ಉಚ್ಚಾರಣೆಯೊಂದಿಗೆ ಓದುತ್ತಾರೆ. | 11.1 ಸ್ಪಷ್ಟ ಓದು<br>11.2 ಗದ್ಯ ಓದಿಸುವುದು<br>11.3 ಮುದ್ರಿತ ಸಾಹಿತ್ಯ | 11.1 ಶಿಕ್ಷಕರು ವಿದ್ಯಾರ್ಥಿಗಳಿಗೆ ಭಾಷೆಯಲ್ಲಿ ಮಾತ್ರೆಯ ಬಳಕೆಯನ್ನು ಪರಿಚಯ ಮಾಡಿರಿ.<br>ಆಯ್ದ ಗದ್ಯಭಾಗವನ್ನು ಪ್ರತಿ ವಿದ್ಯಾರ್ಥಿಯಿಂದ ಓದಿಸಿ, ಹ್ರಸ್ವ-ದೀರ್ಘಸ್ವರಗಳ ಉಚ್ಚಾರಣೆಯನ್ನು ಗಮನಿಸಿ. |
| | | ಅಲ್ಪಪ್ರಾಣ ಮತ್ತು ಮಹಾಪ್ರಾಣಗಳ ವ್ಯತ್ಯಾಸವನ್ನು ತಿಳಿದು ಸ್ಪಷ್ಟವಾಗಿ ಉಚ್ಚರಿಸುವರು. | 12.1 ಧ್ವನಿ ಪೆಟ್ಟಿಗೆ<br>12.2 ಮೌನ ಬಂಗಾರ<br>12.3 ಗ್ರಂಥಾಲಯದಲ್ಲಿ ವಾಚನ | 12.1 ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ಧ್ವನ್ಯಂಗಗಳ ಪರಿಚಯ ಮಾಡಿಸುವುದು.<br>12.2 ಪಠ್ಯದಲ್ಲಿರುವ ನಿರ್ದಿಷ್ಟ ಗದ್ಯಭಾಗವನ್ನು ಮೌನವಾಗಿ ಓದಿ, ಅದರಲ್ಲಿರುವ |

| | | | | |
|---|---|---|---|---|
| | | | | ಮಹಾಪ್ರಾಣಾಕ್ಷರದಿಂದ ಕೂಡಿರುವ ಪದಗಳನ್ನು ಗುರುತಿಸಿ, ಪಟ್ಟಿ ಮಾಡಿಸಿ ಸ್ಪಷ್ಟವಾಗಿ ಓದಲು ಅನುಕೂಲಿಸಿ |
| 13<br>14 | ಪರಿಚಿತ ಪದ್ಯಭಾಗವನ್ನು ರಾಗಬದ್ಧವಾಗಿ ಹಾಡುವರು. | ಪದ್ಯಭಾಗವನ್ನು ಸೂಕ್ತ ರಾಗಸಂಯೋಜನೆ ಯೊಂದಿಗೆ ಹಾಡುತ್ತಾರೆ. ಕವಿಯ ವರ್ಣನೆಯನ್ನು ಕುರಿತು ಪ್ರಶಂಸೆಯನ್ನು ವ್ಯಕ್ತಪಡಿಸುತ್ತಾರೆ. | 13.1 ನಲಿಯುತ್ತ ಹಾಡೋಣ<br>13.2 ನನ್ನ ಕವಿತೆ – ನನ್ನ ಕಲ್ಪನೆ | 13.1 ಹಿಂದಿನ ತರಗತಿಯ ಅಥವಾ ಪರಿಚಿತ ಪದ್ಯವನ್ನು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಹಾಡಿಸಿ. ಪದ್ಯಭಾಗದ ಧ್ವನಿಸುರುಳಿಯನ್ನು ಕೇಳಿಸಿ<br>13.2 ವಿದ್ಯಾರ್ಥಿಗಳಿಂದ ಸ್ವರಚಿತ ಕವನಗಳನ್ನು ಹಾಡಿಸಿ. |
| 15 | ಸೂಚನಾಫಲಕಗಳಲ್ಲಿನ ಸರಳ ಸೂಚನೆ, ಚಿತ್ರಸರಣಿ ಮತ್ತು ದಿನಪತ್ರಿಕೆಯ ಮುಖ್ಯಾಂಶಗಳನ್ನು ಓದಿ ಅರ್ಥೈಸಿಕೊಳ್ಳುವುದು. | ಸೂಚನಾಫಲಕದಲ್ಲಿರುವ ವಿಷಯಗಳ ಉದ್ದೇಶ ಮತ್ತು ಪ್ರಾಮುಖ್ಯತೆಯನ್ನು ತಿಳಿಯುವರು. | 15.1 ನೋಡಿ ಓದು<br>15.2 ಸೂಚನಾ ಫಲಕ – ಓದಿ ಪುಳಕ<br>15.3 ಸೂಚನೆ ಏಕೆ? ಹೇಗೆ | 15.1 ಸ್ನೇಹಿತರ ಕೈಬರಹಗಳನ್ನು ಓದಿಸಿ<br>15.2 ವಿವಿಧ ಸೂಚನಾಫಲಕದಲ್ಲಿರುವ ಹೇಳಿಕೆಗಳನ್ನು ಓದಿಸಿ<br>15.3 ಹೇಳಿಕೆಯ ಹಿಂದಿರುವ ಉದ್ದೇಶವನ್ನು ಬರೆಸಿ ನಂತರ ಓದಿಸಿ. |
| 16 | | ಚಿತ್ರಸರಣಿಯನ್ನು ಅನುಸರಿಸಿ ಕಥೆಯನ್ನು | 16.1 ಚಿತ್ರ ನೋಡು-ಕಥೆ ಓದು | 16.1 ಚಿತ್ರಸರಣಿಯಿಂದ ಕೂಡಿರುವ ಕಥೆಗಳನ್ನು ಓದಿಸಿ ಇಂತಹ ಚಿತ್ರಸರಣಿಯ |

| | | | | |
|---|---|---|---|---|
| | | ಸ್ಪಷ್ಟವಾಗಿ ಹಾಗೂ ಅರ್ಥಪೂರ್ಣವಾಗಿ ಓದುತ್ತಾರೆ. | 16.2 ಚಿತ್ರಸರಣಿಯ ಕಥೆ ರಚಿಸೋಣ | ಕಥೆಗಳನ್ನು ಸಂಗ್ರಹಿಸುವಂತೆ ಸೂಚಿಸಿ.<br>16.2 ವಿದ್ಯಾರ್ಥಿಗಳು ಸ್ವತಃ ಇಂತಹ ಚಿತ್ರಸರಣಿಯ ಕಥೆಯನ್ನು ರಚಿಸಲು ಪ್ರೇರೇಪಿಸಿ |
| 17 | | ದಿನಪತ್ರಿಕೆಯ ಮುಖ್ಯಾಂಶಗಳನ್ನು ಸೂಕ್ತಸ್ವರಭಾರ ದೊಂದಿಗೆ ವಾಚಿಸುತ್ತಾರೆ. | 17.1 ಮಕ್ಕಳ ವಾರ್ತೆ<br>17.2 ನಮ್ಮ ಸುದ್ದಿ | 17.1 ವಿದ್ಯಾರ್ಥಿಗಳಿಂದ ದಿನಪತ್ರಿಕೆಯಲ್ಲಿರುವ ಪ್ರಮುಖ ಸುದ್ದಿಗಳನ್ನು ಅಥವಾ ಸುದ್ದಿವಾಹಿನಿಯಲ್ಲಿ ಪ್ರಸಾರವಾದ ಪ್ರಮುಖ ಸುದ್ಧಿಗಳನ್ನು ಪಟ್ಟಿ ಮಾಡಿಸಿ, ಅವನ್ನುವಾರ್ತೆಯ ರೂಪದಲ್ಲಿ ವಾಚನ ಮಾಡಿಸಿ.<br>17.2 ವಿದ್ಯಾರ್ಥಿಗಳಿಂದ ಸ್ವ ಅನುಭವಗಳನ್ನು ಸುದ್ದಿಯ ರೂಪದಲ್ಲಿ ರಚಿಸಿ ಓದಿಸಿ |
| 18<br><br>19 | ಅಕ್ಷರ, ಪದ ಮತ್ತು ವಾಕ್ಯಗಳನ್ನು ಶುದ್ಧವಾಗಿ ತಪ್ಪಿಲ್ಲದೆ ಬರೆಯುವರು. | ಅಕ್ಷರ ಮತ್ತು ಪದಗಳನ್ನು ಸೂಕ್ತ ಗಾತ್ರ ಮತ್ತು ಅಂತರದೊಂದಿಗೆ ಸ್ಪಷ್ಟವಾಗಿ ಬರೆಯುತ್ತಾರೆ. | 18.1 ಅಂದವಾಗಿ ಬರೆ<br>18.2 ನನ್ನ ಲಿಪಿ | 18.1 ಅಕ್ಷರಗಳ ಸರಿಯಾದ ವಿನ್ಯಾಸವನ್ನು ಪರಿಚಯಿಸಿ. ಅಚ್ಚುಕಟ್ಟಾದ ಬರವಣಿಗೆಯಿಂದ ಕೂಡಿರುವ ಮಾದರಿ ಬರಹವನ್ನು ತೋರಿಸಿ, ಅದರಂತೆ ನಕಲು ಬರಹವನ್ನು ಬರೆಸಿ. |
| | | ಅಕ್ಷರ ಮತ್ತು ಪದಗಳನ್ನು ತಪ್ಪಿಲ್ಲದೆ ಬರೆಯುತ್ತಾರೆ. | 19.1 ಉಕ್ತಲೇಖನ<br>19.2 ತಪ್ಪಿಲ್ಲದೆ ಬರೆಯುವೆ | 19.1 ಒತ್ತಕ್ಷರದಿಂದ ಕೂಡಿದ ಸಾಧಾರಣ ಪದಗಳ ಉಕ್ತಲೇಖನವನ್ನು ನೀಡಿರಿ.<br>ವಿದ್ಯಾರ್ಥಿಗಳು ತಮ್ಮ ಬರಹದಲ್ಲಿ ಮಾಡಿರುವ ದೋಷಗಳನ್ನು ತಿದ್ದಿ ಮಾರ್ಗದರ್ಶನ ಮಾಡುವುದು. |

| | | | | |
|---|---|---|---|---|
| 20 | | ಸೂಚನೆಯನ್ನು ಅನುಸರಿಸಿ ಸ್ವಂತವಾಕ್ಯವನ್ನು ರಚಿಸಿ ಬರೆಯುತ್ತಾರೆ. | 20.1 ಸ್ವಂತವಾಕ್ಯ ರಚನೆ<br>20.2 ನನ್ನ ವಾಕ್ಯ - ಘೋಷವಾಕ್ಯ | 20.1 ಕರ್ತೃ, ಕರ್ಮ ಮತ್ತು ಕ್ರಿಯೆಯನ್ನು ಸಂಕ್ಷಿಪ್ತವಾಗಿ ಪರಿಚಯಿಸುವುದು.<br>ವಿದ್ಯಾರ್ಥಿಗಳಿಗೆ ಕೆಲವು ಪರಿಚಿತ ಪದಗಳ ಮಿಂಚುಪಟ್ಟಿಯನ್ನುನೀಡಿ ಅವುಗಳನ್ನು ಬಳಸಿಕೊಂಡು ಅರ್ಥಪೂರ್ಣ ಸ್ವಂತವಾಕ್ಯಗಳನ್ನು ರಚಿಸಲು ಸೂಚಿಸುವುದು. |
| 21 | ಸರಳ ಕವನ, ಲಘು ಟಿಪ್ಪಣಿಯನ್ನು ಸ್ವಂತಿಕೆಯಿಂದ ಬರೆಯುವುದನ್ನು ಕಲಿಯುವರು. | ಬರಹದಲ್ಲಿ ತಮ್ಮ ಭಾವನೆಗಳನ್ನು ಹಾಗೂ ಕಲ್ಪನೆಯನ್ನು ಅಭಿವ್ಯಕ್ತಿಸುತ್ತಾರೆ. | 21.1 ಸೃಜನಶೀಲ ಬರಹ<br>21.2 ಪುಟಾಣಿ ಕವನ<br>21.2 ಹೀಗೊಂದು ಕಥೆ | 21.1 ವಿದ್ಯಾರ್ಥಿಗಳಿಂದ ಅವರ ಕಲ್ಪನೆಗೆ ಅನುಗುಣವಾಗಿ ಪ್ರಾಸಬದ್ಧವಾಗಿ ಕವನವನ್ನು ಬರೆಯಲು ಪ್ರೇರೇಪಿಸಿ.<br>ವೀಕ್ಷಿಸಿದ ಚಿತ್ರಕ್ಕೆ ಅನುಗುಣವಾಗಿ ಕಲ್ಪಿಸಿಕೊಂಡು ಕಥೆ ಅಥವಾ ಕವನ ರಚಿಸಲು ಪ್ರೇರೇಪಿಸಿ. |
| 22 | | ಸರಳ ವಾಕ್ಯಗಳನ್ನು ಮತ್ತು ವಾಕ್ಯ ವೃಂದಗಳನ್ನು ರಚಿಸುತ್ತಾರೆ | 23.1 ಲಘು ಟಿಪ್ಪಣಿ<br>23.2 ಸುಳಿವು - ತಿಳಿವು | 23.1 ವಿದ್ಯಾರ್ಥಿಗಳಿಂದ ಅವರು ಮೆಚ್ಚುವ ವಸ್ತು, ಸ್ಥಳ ಅಥವಾ ವಿಷಯದ ಬಗ್ಗೆ ಲಘು ಟಿಪ್ಪಣಿಯನ್ನು ಬರೆಸುವುದು.<br>* ನನ್ನ ಶಾಲೆ, ನನ್ನ ಊರು, ತೆಂಗಿನ ಮರ ಇತ್ಯಾದಿ ಸರಳ ವಿಷಯಗಳ ಕುರಿತು ಲಘು ಟಿಪ್ಪಣಿಯನ್ನು ಬರೆಸುವುದು<br>23.3 ಸುಳಿವು ಪದಗಳನ್ನು ನೀಡಿ ವಾಕ್ಯ ರಚಿಸಲು ಹೇಳುವುದು ಉದಾ: ಕಾಡು, ಸಿಂಹ, ವಾಸ, ಮೊಲ,ಜಿಂಕೆ, ಸಸ್ಯ, ಕೆರೆ . |

| | | | | |
|---|---|---|---|---|
| | | | | ಕಾಡಿನಲ್ಲಿ ಸಿಂಹ ವಾಸವಾಗಿತ್ತು. ಮೊಲ ಜಿಂಕೆಯಂತಹ ಪ್ರಾಣಿಗಳು ಸಸ್ಯ ತಿನ್ನುತ್ತಿದ್ದವು. |
| 23<br>24<br>25<br>26 | ಭಾಷಾಂಶಗಳನ್ನು ಮತ್ತು ಕ್ರಿಯಾತ್ಮಕ ವ್ಯಾಕರಣವನ್ನು ಅರಿತುಕೊಳ್ಳುವರು. | ವಿರುದ್ಧಾರ್ಥಕ ಪದಗಳನ್ನು ತಿಳಿಯುತ್ತಾರೆ. | 24.1 ಉಪಸರ್ಗ ತಿಳಿಯೋಣ<br>24.2 ಕ್ರಿಯೆ– ಪ್ರತಿಕ್ರಿಯೆ | 24 ವಿರುದ್ಧಾರ್ಥಕ ಪದಗಳಲ್ಲಿ ಬಳಕೆಯಾಗುವ ಉಪಸರ್ಗಗಳನ್ನು ಪರಿಚಯಿಸುವುದು.<br>25 ಒಬ್ಬ ವಿದ್ಯಾರ್ಥಿ ಮಾಡಿದ ಕ್ರಿಯೆಗೆ ಮತ್ತೊಬ್ಬ ವಿದ್ಯಾರ್ಥಿಯಿಂದ ತದ್ವಿರುದ್ಧ ಪ್ರತಿಕ್ರಿಯೆ ಮಾಡಿಸಿ ವಿರುದ್ಧಾರ್ಥಕ ಪದಗಳನ್ನು ಪರಿಚಯಿಸಿ, ವಿದ್ಯಾರ್ಥಿಗಳಿಂದ ವಿರುದ್ಧಾರ್ಥಕ ಪದಗಳ ಪಟ್ಟಿ ತಯಾರಿಸುವುದು.<br>ಉದಾ : ಕೂರುವುದು- ನಿಲ್ಲುವುದು, ಬಾಗಿಲನ್ನುಮುಚ್ಚುವುದು- ತೆರೆಯುವುದು, ಅಳುವುದು- ನಗುವುದು ಇತ್ಯಾದಿ |
| | | ಸಮಾನಾರ್ಥಕ ಮತ್ತು ನಾನಾರ್ಥಕ ಪದಗಳನ್ನು ತಿಳಿಯುತ್ತಾರೆ. | 24.1 ಚಾರ್ಟ್ ತಯಾರಿಕೆ<br>24.2 ಪದ ಕೋಷ್ಟಕ<br>24.3 ಪದ ಬಂಧ | 24.1 ಸಮಾನಾರ್ಥಕ ಮತ್ತು ನಾನಾರ್ಥಕ ಪದಗಳ ಪಟ್ಟಿಯನ್ನು ಬರೆಸಿ ವಿದ್ಯಾರ್ಥಿಗಳಿಂದ ಅದರ ಚಾರ್ಟನ್ನು ತಯಾರಿಸಿ ಅಂತಹ ಪದಗಳಿಗೆ ನಾನಾರ್ಥದಲ್ಲಿ ಪ್ರತ್ಯೇಕ ವಾಕ್ಯಗಳನ್ನು ಬರೆಸಿ ಓದಿಸುವುದು.<br>ಉದಾ : ಸೂರ್ಯ : ಭಾಸ್ಕರ, ದಿನಪ, |

| | | | | |
|---|---|---|---|---|
| | | | | ಭಾನು<br>ಕರಿ - ಆನೆ, ಕಪ್ಪು, ಕರೆ |
| | | ದ್ವಿರುಕ್ತಿ ಮತ್ತು ಅನುಕರಣಾವ್ಯಯಗಳ ನಡುವಿನ ವ್ಯತ್ಯಾಸವನ್ನು ತಿಳಿಯುತ್ತಾರೆ. | 25.1 ಕುಹೂ ಕುಹೂ<br>25.2 ವ್ಯತ್ಯಾಸ ತಿಳಿಯುವೆ | 25.1 ವಿದ್ಯಾರ್ಥಿಗಳಿಂದ ವಿವಿಧ ಪ್ರಾಣಿಗಳ ಧ್ವನಿಯನ್ನು ಅನುಕರಿಸಿ ಉಚ್ಚಾರಣೆ ಮಾಡಿಸಿ.<br>ದ್ವಿರುಕ್ತಿಯಿಂದ ಕೂಡಿರುವ ವಾಕ್ಯಗಳನ್ನು ಹೇಳಿ, ದ್ವಿರುಕ್ತಿಯ ವಿವರಣೆ ನೀಡಿ<br>25.2 ದ್ವಿರುಕ್ತಿ ಮತ್ತು ಅನುಕರಣಾವ್ಯಯ ಈ ಎರಡೂ ಪ್ರಕಾರದ ಹಲವು ಪದಗಳನ್ನು ಬರೆಸಿ ಅವುಗಳನ್ನು ಅವುಗಳ ಪ್ರಕಾರಕ್ಕೆ ಅನುಗುಣವಾಗಿ ವಿಂಗಡಿಸಿ ಬರೆಸಿ. |
| | | ನಾಮಪದ ಮತ್ತು ಕ್ರಿಯಾಪದಗಳು ರೂಪುಗೊಳ್ಳುವ ಬಗೆಯನ್ನು ತಿಳಿದುಕೊಳ್ಳುತ್ತಾರೆ. | 26.1 ಬಿಡಿಸಿ ಬರೆ<br>26.2 ಚಾರ್ಟ್ ತಯಾರಿಕೆ | 26.1 ನಾಮಪದಗಳಲ್ಲಿ ಬರುವ ನಾಮಪ್ರಕೃತಿ ಮತ್ತು ವಿಭಕ್ತಿಪ್ರತ್ಯಯಗಳನ್ನು; ಕ್ರಿಯಾಪದದಲ್ಲಿ ಬರುವ ಕ್ರಿಯಾಪ್ರಕೃತಿ, ಕಾಲಸೂಚಕಪ್ರತ್ಯಯ ಮತ್ತು ಆಖ್ಯಾತಪ್ರತ್ಯಯಗಳನ್ನು ಪರಿಚಯಿಸಿ.<br>ನಾಮಪದ ಮತ್ತು ಕ್ರಿಯಾಪದಗಳನ್ನು ನೀಡಿ ಅವುಗಳ ವಿಭಕ್ತಿ ಮತ್ತು ಪ್ರತ್ಯಯಗಳನ್ನು ಬಿಡಿಸಿ ಬರೆದ ಚಾರ್ಟ್ ತಯಾರಿಸಿ. |
| 27 | | ವಿಭಕ್ತಿ ಪ್ರತ್ಯಯಗಳನ್ನು | 27.1 ಪದ ಶೋಧ | 27.1 ಮುದ್ರಿತ ಪಠ್ಯದಲ್ಲಿ ಬಳಕೆಯಾಗಿರುವ ವಿಭಕ್ತಿಪ್ರತ್ಯಯವನ್ನು |

<table>
<tr><td></td><td></td><td>ಪರಿಚಯ<br>ಮಾಡಿಕೊಳ್ಳುತ್ತಾರೆ</td><td>27.2 ಪ್ರಕೃತಿಗೊಂದು ಪ್ರತ್ಯಯ</td><td>ಒಳಗೊಂಡಪದಗಳನ್ನು ಗುರುತು ಮಾಡಿಸಿ ಓದಿಸಿ<br>27.2 ಕೆಲವು ನಾಮಪ್ರಕೃತಿಗಳನ್ನು ಬರೆಸಿ ಅವುಗಳಿಗೆ ವಿಭಕ್ತಿಪ್ರತ್ಯಯಗಳನ್ನು ಸೇರಿಸಿ ಪದಗಳನ್ನು ರಚಿಸಲು ಸೂಚಿಸಿ.</td></tr>
<tr><td>28</td><td></td><td>ವಸ್ತುವಾಚಕದ ವಿಧಗಳು ಮತ್ತು ಸರ್ವನಾಮಗಳನ್ನು ಪರಿಚಯ ಮಾಡಿಕೊಳ್ಳುತ್ತಾರೆ.</td><td>28.1 ಹೊಂದಿಸಿ ಬರೆ<br><br>28.2 ಪದಕೋಷ್ಟಕ</td><td>28.1 ರೂಢನಾಮ, ಅಂಕಿತನಾಮ ಮತ್ತು ಅನ್ವರ್ಥನಾಮಗಳ ನಡುವಿನ ವ್ಯತ್ಯಾಸವನ್ನು ಉದಾಹರಣೆಗಳೊಂದಿಗೆ ಪರಿಚಯಿಸಿ.<br>ಅಂತಹ ಪದಗಳನ್ನು ನೀಡಿ ಅವುಗಳನ್ನು ಅವುಗಳ ಪ್ರಕಾರಕ್ಕೆ ಅನುಗುಣವಾಗಿ ಹೊಂದಿಸಿ ಬರೆಸಿ.<br>28.2 ಮಾದರಿಯಂತೆ ಮೂರು ಅಕ್ಷರದ ಪದವನ್ನು ನೀಡಿ ಅರ್ಥಪೂರ್ಣ ಪದಗಳ ಕೋಷ್ಟಕವನ್ನು ರಚಿಸಲು ಮಾರ್ಗದರ್ಶಿಸಿ.<br>ಮಾದರಿ :ಸಾಧನ, ಧನಿಕ, ನಕಲಿ<br><table><tr><td>ಸಾ</td><td>ಧ</td><td>ನ</td></tr><tr><td>ಧ</td><td></td><td></td></tr><tr><td>ನ</td><td></td><td></td></tr></table></td></tr>
<tr><td>29</td><td></td><td>ನಾಮಪದ ಹಾಗೂ ಕ್ರಿಯಾಪದಗಳನ್ನು ಗುರುತಿಸುತ್ತಾರೆ</td><td>29.1. ಮೂಕಾಭಿನಯ</td><td>29.1. ವಿವಿಧ ನಾಮಪದಗಳನ್ನು ಚೀಟಿಯಲ್ಲಿ ಬರೆದು, ಪ್ರತಿ ವಿದ್ಯಾರ್ಥಿಗಳಿಂದ ಒಬ್ಬೊಬ್ಬರನ್ನಾಗಿ ಕರೆಸಿ</td></tr>
</table>

| | | | | |
|---|---|---|---|---|
| | | | 29.2. ನಿನ್ನ ಪದ ನನ್ನ ಅಭಿನಯ | ತಮಗೆ ಸಿಕ್ಕಚೀಟಿಯಲ್ಲಿರುವ ನಾಮಪದವನ್ನು ಮೂಕಾಭಿನಯ ಮಾಡುವ ಮೂಲಕ ಪರಿಚಯಿಸುವ ಚಟುವಟಿಕೆ ಮಾಡಿಸಿ.<br>29.2 ಕ್ರಿಯಾಪದಗಳ ಮೂಕಾಭಿನಯ ಮಾಡಿಸಿ. |
| 30 | | ಧ್ವನಿ ವ್ಯತ್ಯಾಸವಿರುವ ಪದಗಳನ್ನು ಪರಿಚಯ ಮಾಡಿಕೊಳ್ಳುತ್ತಾರೆ. | 30.1 ಹುಡುಕಿ ವ್ಯತ್ಯಾಸ ತಿಳಿ<br>30.2 ನಾ ಬೇರೆ ನೀ ಬೇರೆ | 30.1 ಧ್ವನಿ ವ್ಯತ್ಯಾಸವಿರುವ ಪದಗಳನ್ನು ಬರೆಸುವುದು.<br>30.2 ವಿದ್ಯಾರ್ಥಿಗಳಿಗೆ ನಿಘಂಟನ್ನು ನೀಡಿ ಅರ್ಥ ವ್ಯತ್ಯಾಸವನ್ನು ತಿಳಿದು ಹೇಳುವಂತೆ ಸೂಚಿಸಿ, ಸ್ವಂತ ವಾಕ್ಯದಲ್ಲಿ ಹೇಳಿಸಿ.<br>ಉದಾ : ಅರಸು – ಹರಸು, ಆಳು-ಹಾಳು, ಅಕ್ಕಿ-ಹಕ್ಕಿ, ದನ-ಧನ |